ಅಸಲು ದಾವಾ ನಂ. **93/2014**
ಡಿ ಡಬ್ಲ್ಯೂ : **1**

(ಇಂದು ದಿನಾಂಕ: **16.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲು:- ವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದ:

ವಾದಿ ನಮ್ಮ ಊರಿನವರು. ವಾದಿ ಗಂಡನ ಹೆಸರು ನಾಗಯ್ಯ ಇರುತ್ತದೆ. ಸದರಿ ನಾಗಯ್ಯ ಮೃತರಾಗಿರುತ್ತಾರೆ. ನಾಗಯ್ಯ ನಾನು ಚಿಕ್ಕವನಿದ್ದಾಗ ಮೃತರಾಗಿರುತ್ತಾರೆ. ವಾದಿಗೆ 5 ಜನ ಮಕ್ಕಳು. ಅವರುಗಳೆಂದರೆ ನಾಗಯ್ಯ, ವೀರಭದ್ರ, ಕಾಳಯ್ಯ, ಚಂದ್ರಮ್ಮ ಇರುತ್ತದೆ. ವಾದಿ ಈಗಲೂ ಸಹ ಜೀವಂತ ಇರುತ್ತಾರೆಂದರೆ ಸರಿ. ವಾದಿ ಹಾಜರುಪಡಿಸಿರುವ ವಂಶವೃಕ್ಷವನ್ನು ನೋಡಿರುವುದಿಲ್ಲ. ನನ್ನ ತಂದೆಯ ಹೆಸರು ಈರಯ್ಯ ಪೂಲೀರಯ್ಯ. ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿಲ್ಲ. ನಾನು ನಮ್ಮ ವಂಶಕ್ಕೆ ಸೇರಿದ ವಂಶವೃಕ್ಷವನ್ನು ತಾಲ್ಲೂಕು ಕಚೇರಿಯಿಂದ ಪಡೆದು ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ್ 38, 36, 48 ರಲ್ಲಿ ನನ್ನ ತಂದೆಯ ಹೆಸರು ಈರಯ್ಯ ಪೂಲೀರಯ್ಯ ಎಂದು ಇರುತ್ತದೆ.

ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮತ್ತು ಆಹಾರ ಪಡಿತರ ಚೀಟಿ ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆಗಳನ್ನು ತಾಲ್ಲೂಕು ಕಚೇರಿಯವರು ಕೊಟ್ಟಿರುತ್ತಾರೆ. ನಾನು ಹಾಜರುಪಡಿಸಿರುವ ವಂಶವೃಕ್ಷ ನಿಡಿ-1 ಅನ್ನು ನಾನೇ ಹೇಳಿ ಬರೆಸಿರುತ್ತೇನೆ. ಪೂಲೀರಯ್ಯನ ತಂದೆಯ ಹೆಸರು ಕಾಡಯ್ಯ ಇರುತ್ತದೆ. ಕಾಡಯ್ಯನವರಿಗೆ ಸೇರಿದ ಮರಣ ಪ್ರಮಾಣ ಪತ್ರ ಇರುವುದಿಲ್ಲ. ಕಾಡಯ್ಯನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಕಾಡಯ್ಯನವರಿಗೆ ಈರಯ್ಯ ಎನ್ನುವ ಒಬ್ಬ ಮಗ ಇರುತ್ತಾನೆ. ಕಾಡಯ್ಯನವರ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ.

ಈ ಕೇಸಿನ ಇತರೆ ಪ್ರತಿವಾದಿಯರು ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ಕೊಟ್ಟಿರುವುದಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ಗೊತ್ತಿದ್ದು ಚೆಕ್ಕುಬಂದಿ ಗೊತ್ತಿಲ್ಲ. ಮತ್ತು ದಾವಾ ಆಸ್ತಿಗಳ ವಿಸ್ತೀರ್ಣ ಗೊತ್ತಿಲ್ಲ. ಮುಳ್ಳಯ್ಯ ನನಗೆ ಚಿಕ್ಕಪ್ಪನಾಗಬೇಕು. ಮುಳ್ಳಯ್ಯನ ತಂದೆಯ ಹೆಸರು ಫಸಲಯ್ಯ. ಫಸಲಯ್ಯನಿಗೆ 3 ಜನ ಮಕ್ಕಳು. ಅವರುಗಳೆಂದರೆ ಈರಯ್ಯ, ಚಿಕ್ಕಮ್ಮ ಮತ್ತು ಸಂಗಯ್ಯ ಇರುತ್ತದೆ. ದೊಡ್ಡಯ್ಯನ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಅವರ ತಂದೆಯ ಬಗ್ಗೆಯೂ ಸಹ ಗೊತ್ತಿಲ್ಲ. ದೊಡ್ಡಯ್ಯನಿಗೆ ಹೊಟ್ಟಯ್ಯ ಎಂಬ ಮಗ ಇರುತ್ತಾರೆ. ದೊಡ್ಡಯ್ಯನ

ಹೆಂಡತಿಯ ಹೆಸರು ಜವರಮ್ಮ ಎಂದರೆ ಸರಿಯಲ್ಲ. ಸದರಿ ಜವರಮ್ಮ ದೊಡ್ಡರಾಮಯ್ಯನ ಹೆಂಡತಿ ಸಾಕ್ಷಿ ನುಡಿಯುತ್ತಾರೆ. ದೊಡ್ಡರಾಮಯ್ಯನಿಗೆ ಕುಮಾರ, ಚಂದ್ರಯ್ಯ, ಚಂದ್ರಮ್ಮ, ಲಕ್ಷ್ಮೀ ಮತ್ತು ನಾಗರಾಜು ಎಂಬ ಮಕ್ಕಳಿರುತ್ತಾರೆ. ಹೊಟ್ಟಯ್ಯ ಕಾಳೀರಯ್ಯನ ಮಗ ಇರುತ್ತಾರೆ. ಅವರ ಹೆಂಡತಿಯ ಹೆಸರು ದೊಡ್ಡಮ್ಮ ಇರುತ್ತದೆ. ಸದರಿ ಕಾಳೀರಯ್ಯನಿಗೆ ಈರಮ್ಮ, ರುದ್ರಮ್ಮ ಮತ್ತು ಪಾರ್ವತಮ್ಮ ಎಂಬ ಹೆಣ್ಣು ಮಕ್ಕಳಿರುತ್ತಾರೆ.

ದಾವಾ ಆಸ್ತಿಗಳು ಮಲ್ಲಿಗನೂರು ಗ್ರಾಮದ ಕುಳುವಾಡಿಕೆ ಜಮೀನುಗಳು ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಕುಟುಂಬಕ್ಕೆ ಮಂಜೂರಾದ ದಾಖಲೆಗಳು ಇರುತ್ತದೆ. ಈ ಬಗ್ಗೆ ಆದೇಶ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾಗಮ್ಮ ಕೋಂ ನಾಗಯ್ಯ ಈ ಕೇಸಿನ ವಾದಿ ಎಂದರೆ ಸರಿ. ದಾವಾ ಆಸ್ತಿಗಳು ವಾದಿಗೆ ಕುಳುವಾಡಿಕೆ ಮೂಲಕ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಾಗಯ್ಯ, ರಂಗನಾಥಯ್ಯ, ನನಗೆ, ಮುಳ್ಳಯ್ಯ, ಸಣ್ಣರಾಮಯ್ಯ ಮತ್ತು ಹೊಟ್ಟಯ್ಯನಿಗೆ 1987 ರಲ್ಲಿ ತಹಶೀಲ್ದಾರ್ ರವರು ಮಂಜೂರು ಮಾಡಿರುತ್ತಾರೆ. ಮಂಜೂರಾತಿಗೂ ಮೊದಲು ಸದರಿ ಆಸ್ತಿಗಳು ಪೊಲೀರಯ್ಯ, ಮುಳ್ಳಯ್ಯನವರ ಹೆಸರಿನಲ್ಲಿದ್ದವು.

ಹೆಚ್ ಒ ಎ ನಂ. 111/1978-79 ರ ದಾಖಲೆಯನ್ನು ನೋಡಿಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿಲ್ಲ. ದಾವಾ ಆಸ್ತಿಗಳು ಸದರಿ ನಿಪಿ-6 ರ ಪ್ರಕಾರ ವಾದಿಗೆ, ದೊಡ್ಡಯ್ಯ ಬಿನ್ ಈರಯ್ಯ, ಹೊಟ್ಟಯ್ಯ ಮತ್ತು ಮುಳ್ಳಯ್ಯನವರಿಗೆ ಮಂಜೂರಾಗಿರುತ್ತದೆ. ಈ ಕೇಸಿನಲ್ಲಿ 13 ಜನ ಪ್ರತಿವಾದಿಗಳು ಇರುತ್ತಾರೆ. 1 ರಿಂದ 7ನೇ ಪ್ರತಿವಾದಿಯರು ದೊಡ್ಡಯ್ಯನ ವಂಶಸ್ಥರು ಎಂದರೆ ಸರಿ. 8 ರಿಂದ 10 ನೇ ಪ್ರತಿವಾದಿಗಳು ಮುಳ್ಳಯ್ಯನ ವಂಶಸ್ಥರು ಎಂದರೆ ಸರಿ. 11 ರಿಂದ 13 ನೇ ಪ್ರತಿವಾದಿಗಳು ಹೊಟ್ಟಯ್ಯನ ವಂಶಸ್ಥರು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಮತ್ತು ನನ್ನ ಹೆಸರಿಗೆ ಮಂಜೂರಾಗಿರುತ್ತದೆ. ನಾವು ಮತ್ತು ವಂಶಸ್ಥರು ಕುಳುವಾಡಿಕೆದಾರರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ಸದರಿ ದಾಖಲೆಯನ್ನು ತೆಗೆದು ಹಾಜರುಪಡಿಸುತ್ತೇನೆ. ನಮ್ಮ ಅಜ್ಜ ಕುಳುವಾಡಿಕೆದಾರರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಇರುತ್ತದೆ.

ವಾದಿ ಮತ್ತು ನಾವುಗಳು ಮಲ್ಲಿಗನೂರು ಗ್ರಾಮದಲ್ಲಿ ಕುಳುವಾಡಿಕೆದಾರರಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದೆವು ಎಂದರೆ ಸಾಕ್ಷಿ ವಾದಿ ವಂಶವೇ ಬೇರೆ ನಮ್ಮ ವಂಶವೇ ಬೇರೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಮಳವಳ್ಳಿ ಗ್ರಾಮದಲ್ಲಿ ಕುಳುವಾಡಿಕೆ ಜಮೀನುಗಳು ಇರುತ್ತವೆ. ಸರ್ವೆ ನಂಬರ್ 4 ಮಳವಳ್ಳಿ ಗ್ರಾಮದಲ್ಲಿ ವಾದಿಯ ಹೆಸರಿಗೆ ಜಮೀನು ಇರುತ್ತದೆ.

ಸದರಿ ಸರ್ವೆ ನಂಬರ್ ನಲ್ಲಿ ಮುಳ್ಳಯ್ಯ ಬಿನ್ ಫಸಲಯ್ಯನವರ ಹೆಸರಿನಲ್ಲಿ ಆಸ್ತಿ ಇರುತ್ತದೆ ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ 11ನೇ ಪ್ರತಿವಾದಿ ಹೆಸರಿನಲ್ಲಿ ಜಮೀನು ಇರುತ್ತದೆ. ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ ನನ್ನ ಅಣ್ಣನ ಹೆಸರಿನಲ್ಲೂ ಸಹ ಜಮೀನು ಇರುತ್ತದೆ. ಸದರಿ ಸರ್ವೆ ನಂಬರ್ 4 ಆಸ್ತಿ ಕುಳುವಾಡಿಕೆ ಜಮೀನು ಎಂದರೆ ಸರಿ. ಸದರಿ ಜಮೀನು ನಮ್ಮ ಹೆಸರಿಗೆ ಮಂಜೂರಾಗಿರುವ ಬಗ್ಗೆ ದಾಖಲೆ ಇರುತ್ತದೆ. ಸರ್ವೆ ನಂಬರ್ 55 ಮಲ್ಲಿಗನೂರು ಗ್ರಾಮದಲ್ಲಿ 21 ವರೆ ಗುಂಟೆ ಜಮೀನು ಇರುತ್ತದೆ. ಅದೇ ರೀತಿ ಸದರಿ ಸರ್ವೆ ನಂಬರ್ ನಲ್ಲಿ ಮುಳ್ಳಯ್ಯ ಬಿನ್ ಫಸಲಯ್ಯ, ನನಗೆ, ಈರಮ್ಮ ಕೋಂ ವಸಂತರ ಹೆಸರಿನಲ್ಲಿ ತಲಾ 21 ವರೆ ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಸಹ ಕುಳುವಾಡಿಕೆ ಜಮೀನು ಆಗಿರುತ್ತದೆ.

ವಾದಿ ನಮ್ಮ ವಂಶಸ್ಥರಲ್ಲ. ಸಣ್ಣನಾಗಯ್ಯ ನಮ್ಮ ಚಿಕ್ಕಮ್ಮನ ಮಗ ಇರುತ್ತಾರೆ. ಅವರ ತಂದೆ ಹೆಸರು ನಾಗಯ್ಯ ಬಿನ್ ಗಣನಾಗಯ್ಯ ಇರುತ್ತದೆ. ನಾಗಯ್ಯ ಬಿನ್ ಗಣನಾಗಯ್ಯ ಎಂದು ತೋರಿಸಲು ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿ ಇರುತ್ತದೆ. ನಾಗಮ್ಮನ ಗಂಡನ ಹೆಸರು ನಾಗಯ್ಯ ಎಂದು ತೋರಿಸಲು ದಾಖಲೆ ಇರುತ್ತದೆ. ವಾದಿ ಸರ್ವೆ ನಂಬರ್ 36 ರಲ್ಲಿ 36 ಗುಂಟೆ ವಿಸ್ತೀರ್ಣದಲ್ಲಿ ಉಳುಮೆ ಮಾಡುತ್ತಿದ್ದಾರೆ. ಸರ್ವೆ ನಂಬರ್ 38 ರಲ್ಲಿ ಉಳುಮೆ ಮಾಡುತ್ತಿಲ್ಲ. ಸರ್ವೆ ನಂಬರ್ 43 ರಲ್ಲಿ ಸಂಗಯ್ಯ ಬಿನ್ ಈರಯ್ಯ ಉಳುಮೆ ಮಾಡುತ್ತಿದ್ದಾರೆ. ಸರ್ವೆ ನಂಬರ್ 38 ರಲ್ಲಿ 26 ಗುಂಟೆ ಉಳುಮೆ ಮಾಡುತ್ತಿರುವ ಬಗ್ಗೆ ದಾಖಲೆ ಇರುತ್ತದೆ.

ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

ಮರುವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು